# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

**ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010**

**www.souharda.coop, Ph: 080-23378375-80, Email:souharda@souharda.coop**

ಸಂಖ್ಯೆ: ಸಂ.ಸ/ಸಿಬ್ಬಂದಿ/ನೇ.ನೇಮಕಾತಿ/01/2017–18 ದಿನಾಂಕ:12.01.2018

## ಅಧಿಸೂಚನೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದರಲ್ಲಿ ಖಾಲಿ ಇರುವ ವಿವಿಧ ವೃಂದಗಳಲ್ಲಿನ 60 ಹುದ್ದೆಗಳ ನೇಮಕಾತಿಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಅಧಿನಿಯಮ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದರ ಉಪವಿಧಿ ಹಾಗೂ ಸಿಬ್ಬಂದಿ ಸೇವಾನಿಯಮಾವಳಿಯ ನೇರ ನೇಮಕಾತಿ ನಿಯಮ ಹಾಗೂ ಆಡಳಿತ ಮಂಡಲಿ ಮತ್ತು ಸಿಬ್ಬಂದಿ ನೇಮಕಾತಿ ಸಮಿತಿಯ ನಿರ್ಣಯದಂತೆ ಭರ್ತಿ ಮಾಡಲು ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ದಿನಾಂಕ 08.01.2018 ರ ನೇಮಕಾತಿ ಸಮಿತಿ ಸಭೆಯು ಅನುಮೋದಿಸಿದಂತೆ ನೇರ ನೇಮಕಾತಿಗೆ ಪರಿಗಣಿಸಲಾದ ಹುದ್ದೆಗಳು ಮತ್ತು ವಿದ್ಯಾರ್ಹತೆ ವಿವರ ಕೆಳಗಿನಂತಿದೆ.

| ಕ್ರ.ಸಂ | ಹುದ್ದೆಗಳ ಹೆಸರು | ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ |
|---|---|---|---|
| 1 | ಉಪ ಪ್ರಧಾನ ವ್ಯವಸ್ಥಾಪಕರು | 2 | ಅಂಗೀಕೃತ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಅಥವಾ ಸ್ನಾತಕೊತ್ತರ ಪದವಿ ಪಡೆದಿರಬೇಕು. ಕಾನೂನು/ಸಹಕಾರ ಪದವಿಗೆ ಆದ್ಯತೆ. ಕಾನೂನು/ಸಹಕಾರ ಆಡಳಿತದಲ್ಲಿ ಕನಿಷ್ಠ 5 ವರ್ಷ ಅನುಭವ ಹೊಂದಿರಬೇಕು |
| 2 | ಸಹ ಪ್ರಧಾನ ವ್ಯವಸ್ಥಾಪಕರು | 2 | ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ ಅಥವಾ ಸ್ನಾತಕೊತ್ತರ ಪದವಿ ಪಡೆದಿರಬೇಕು. ಕಾನೂನು/ಸಹಕಾರ ಪದವಿಗೆ ಆದ್ಯತೆ. ಕಾನೂನು/ಸಹಕಾರ ಆಡಳಿತದಲ್ಲಿ ಕನಿಷ್ಠ 3 ವರ್ಷ ಅನುಭವ ಹೊಂದಿರಬೇಕು |
| 3 | ಅಧಿಕಾರಿ | 5 | ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ ಅಥವಾ ಸ್ನಾತಕೊತ್ತರ ಪದವಿ ಪಡೆದಿರಬೇಕು. ಕಾನೂನು ಪದವಿಗೆ ಆದ್ಯತೆ. ಕಾನೂನು/ಸಹಕಾರ ಆಡಳಿತದಲ್ಲಿ ಕನಿಷ್ಠ 2 ವರ್ಷ ಅನುಭವ ಹೊಂದಿರಬೇಕು |
| 4 | ತಾಂತ್ರಿಕ ಅಧಿಕಾರಿ (ಅಧಿಕಾರಿ ಶ್ರೇಣಿ) | 2 | ಅಂಗೀಕೃತ ವಿಶ್ವವಿದ್ಯಾಲಯದಿಂದ ಬಿ.ಇ/ಬಿ.ಟೆಕ್ ಪದವಿ ಅಥವಾ ಎಂಸಿಎ/ಸ್ನಾತಕೊತ್ತರ ಪದವಿ ಪಡೆದಿರಬೇಕು. ಹಾಗೂ ಬ್ಯಾಂಕಿಂಗ್ ಸಾಫ್ಟ್‌ವೇರ್ ಕಂಪನಿಗಳಲ್ಲಿ ಕನಿಷ್ಠ 2 ವರ್ಷ ಅನುಭವ ಹೊಂದಿರಬೇಕು. |
| 5 | ಸೌಹಾರ್ದ ಅಭಿವೃದ್ಧಿ ಅಧಿಕಾರಿ (ಕಿರಿಯ ಅಧಿಕಾರಿ ಶ್ರೇಣಿ) | 12 | ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ ಪಡೆದಿರಬೇಕು. ಬ್ಯಾಂಕಿಂಗ್ ಅಥವಾ ಸಹಕಾರ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿದ ಅನುಭವ ಹೊಂದಿದವರಿಗೆ ಆದ್ಯತೆ. |

| | | | |
|---|---|---|---|
| 6 | ವಿನ್ಯಾಸಗಾರರು (ಡಿಸೈನರ್) (ಕಿರಿಯ ಅಧಿಕಾರಿ ಶ್ರೇಣಿ) | 1 | ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ ಪಡೆದಿರಬೇಕು. ಮುದ್ರಣಕ್ಕೆ ಸಂಬಂಧಿಸಿದಂತೆ ಡಿಸೈನಿಂಗ್‌ನಲ್ಲಿ ತರಬೇತಿ ಹೊಂದಿರಬೇಕು. ಮತ್ತು ಅನುಭವ /ಪರಿಣಿತಿ ಅಗತ್ಯ. |
| 7 | ಸಹಾಯಕರು | 22 | ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ ಪಡೆದಿರಬೇಕು. ಬಿ.ಕಾಂ/ಬಿ.ಬಿಎಂ ಪದವಿಗೆ ಆದ್ಯತೆ ನೀಡಲಾಗುವುದು. |
| 8 | ಶೀಘ್ರಲಿಪಿಗಾರರು (ಸ್ಟೆನೋ) | 6 | ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೆ ವಿಷಯದಲ್ಲಿ ಪದವಿ. ಕನ್ನಡ/ಇಂಗ್ಲೀಷ್ ಶೀಘ್ರಲಿಪಿಯಲ್ಲಿ ಪ್ರೌಢದರ್ಜೆಯಲ್ಲಿ (Senior) ತೇರ್ಗಡೆಯಾಗಿರಬೇಕು ಮತ್ತು ಬೆರಳಚ್ಚಿನಲ್ಲಿ ಕನ್ನಡ/ಇಂಗ್ಲೀಷ್ ಭಾಷೆಯಲ್ಲಿ ಪ್ರೌಢದರ್ಜೆ (Senior) ಯಲ್ಲಿ ತೇರ್ಗಡೆಯಾಗಿರಬೇಕು. ಸಂಬಂಧಿಸಿದ ಅಂಗೀಕೃತ ಪ್ರಾಧಿಕಾರದಿಂದ ಪ್ರಮಾಣಪತ್ರ ಪಡೆದಿರಬೇಕು. |
| 9 | ಉಪಸಿಬ್ಬಂದಿ | 4 | ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಕಂಪ್ಯೂಟರ್‌ನಲ್ಲಿ ತಿಳುವಳಿಕೆ ಕಡ್ಡಾಯ. |
| 10 | ಉಪಸಿಬ್ಬಂದಿ ಕಮ್ ವಾಹನ ಚಾಲಕ | 3 | ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಮೋಟಾರ್ ವಾಹನ ಚಾಲನಾ ಪರವಾನಿಗೆ ಪಡೆದಿರಬೇಕು. ಲಘುವಾಹನ ಚಾಲಕರಾಗಿ ಕನಿಷ್ಠ ಮೂರು ವರ್ಷ ಅನುಭವ ಹೊಂದಿರಬೇಕು. |
| 11 | ಸ್ವಚ್ಛತಾ ಸಿಬ್ಬಂದಿ (ಸ್ವೀಪರ್) | 1 | ಏಳನೇ ತರಗತಿ ಉತ್ತೀರ್ಣರಾಗಿರಬೇಕು. ಕನ್ನಡ ಓದಲು ಮತ್ತು ಬರೆಯಲು ಬರಬೇಕು. |

**ವಿಶೇಷ ಗಮನಕ್ಕಾಗಿ :**

1. ಎಲ್ಲ ಹುದ್ದೆಗಳಿಗೂ ಕನ್ನಡ ಭಾಷೆಯನ್ನು ಓದಲು, ಬರೆಯಲು, ಅರ್ಥೈಸಿಕೊಳ್ಳಲು ಮತ್ತು ಮಾತನಾಡಲು ಸಾಮರ್ಥ್ಯವಿರುವಷ್ಟು ಕನ್ನಡ ಪರಿಜ್ಞಾನ ಹೊಂದಿರಬೇಕು.
2. ಕ್ರಮ ಸಂಖ್ಯೆ 1 ರಿಂದ 8ರವರೆಗಿನ ಹುದ್ದೆಗಳಿಗೆ ಕಂಪ್ಯೂಟರ್‌ನಲ್ಲಿ ಪರಿಣಿತಿ ಕಡ್ಡಾಯ. ಅಂದರೆ ಕಂಪ್ಯೂಟರ್ ಕಾರ್ಯಾಚರಣೆ ಮತ್ತು ಬಳಸುವಿಕೆಯ ಪರಿಜ್ಞಾನವಿರಬೇಕು.
3. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಲ್ಲಿ ಖಾಲಿ ಇರುವ ಈ ಮೇಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಸಂಬಂಧ ನೇಮಕಾತಿ ಪ್ರಕ್ರಿಯೆಯ ಪೂರ್ಣ ವಿವರಗಳನ್ನು ಸಂಯುಕ್ತ ಸಹಕಾರಿಯ ಜಾಲತಾಣ (ವೆಬ್‌ಸೈಟ್) www.souharda.coop ರಲ್ಲಿ ಪಡೆದು ಆನ್‌ಲೈನ್ ಮತ್ತು ಆಫ್‌ಲೈನ್ (ಅಂಚೆ/ಕೋರಿಯರ್/ತಲುಪಿಸುವಿಕೆ) ಮೂಲಕವೆ ಅರ್ಜಿ ಸಲ್ಲಿಸತಕ್ಕದ್ದು.

1. **ಅರ್ಜಿಸಲ್ಲಿಸುವ ವಿಧಾನ:**

**ಆಫ್‌ಲೈನ್ ಅರ್ಜಿ ಸಲ್ಲಿಕೆ:** ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಗಳನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವೆಬ್‌ಸೈಟ್ (www.souharda.coop) ನಿಂದ ಡೌನ್‌ಲೋಡ್ ಮಾಡಿಕೊಂಡು, ಭರ್ತಿ ಮಾಡಿ – ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮೇಲ್ಕಂಡ ವಿಳಾಸದಲ್ಲಿನ ಕೇಂದ್ರ ಕಛೇರಿಗೆ ಸಂಬಂಧಪಟ್ಟ ಅರ್ಜಿ ಶುಲ್ಕದ ಡಿ.ಡಿ.ಯೊಂದಿಗೆ ಅಂಚೆ/ಕೋರಿಯರ್/ಖುದ್ದಾಗಿ ತಲುಪಿಸತಕ್ಕದ್ದು.

**ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಕೆ:** ಅರ್ಹ ಅಭ್ಯರ್ಥಿಗಳು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ಇಲ್ಲಿ ಆನ್‌ಲೈನ್ ಮುಖಾಂತರ ಅರ್ಜಿ ತುಂಬಿದ ನಂತರ, ತುಂಬಲ್ಪಟ್ಟ ಅರ್ಜಿಯನ್ನು ಮುದ್ರಿಸಿ ಸಂಬಂಧಪಟ್ಟ ಅರ್ಜಿ ಶುಲ್ಕದ ಡಿ.ಡಿ.ಯೊಂದಿಗೆ ಮೇಲ್ಕಂಡ ವಿಳಾಸಕ್ಕೆ ಕಳುಹಿಸತಕ್ಕದ್ದು.

**ಗಮನಿಸಿ :** ತಾವು ಸಲ್ಲಿಸುತ್ತಿರುವ ಅರ್ಜಿ, ಡಿಡಿ, ಸಂಬಂಧಿಸಿದ ದಾಖಲಾತಿಯನ್ನೊಳಗೊಂಡ ಲಕೋಟೆಯ ಮೇಲೆ **"ಕ.ರಾ.ಸೌ.ಸಂ.ಸ.ನಿ. ನೇಮಕಾತಿ – 2018"** ಎಂದು ನಮೂದಿಸಬೇಕು ಹಾಗೂ **"ವ್ಯವಸ್ಥಾಪಕ ನಿರ್ದೇಶಕರು ಮತ್ತು ಸದಸ್ಯ ಕಾರ್ಯದರ್ಶಿ, ಸಿಬ್ಬಂದಿ ನೇಮಕಾತಿ ಸಮಿತಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ನಿರ್ಮಾಣ ಭವನ, ಡಾ. ರಾಜಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿ ನಗರ, ಬೆಂಗಳೂರು – 560010"** ಈ ವಿಳಾಸಕ್ಕೆ ಕಳುಹಿಸಬೇಕು.

2. **ಅರ್ಜಿಯ ಜೊತೆ ಸಲ್ಲಿಸಬೇಕಾದ ದಾಖಲಾತಿಗಳು :**

   1. ಸೂಕ್ತವಾಗಿ ಪೂರ್ಣ ಪ್ರಮಾಣದಲ್ಲಿ ಭರ್ತಿ ಮಾಡಿದ ಹಾಗೂ ಅಭ್ಯರ್ಥಿಯ ಸಹಿಯನ್ನು ಹೊಂದಿರುವ ಅರ್ಜಿ.
   2. ಹುದ್ದೆಗೆ ನಿಗದಿಪಡಿಸಿದ ಅರ್ಜಿ ಶುಲ್ಕದ ಡಿ.ಡಿ.
   3. ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯನ್ನು ರುಜುವಾತುಪಡಿಸುವ ದಾಖಲಾತಿಗಳ ಸ್ವಯಂ ದೃಢೀಕೃತ ಪ್ರತಿಗಳು. (ಎಲ್ಲಾ ವರ್ಷಗಳ/ಸೆಮಿಸ್ಟರ್‌ಗಳ ಅಂಕಪಟ್ಟಿಗಳು)
   4. ಈಗಾಗಲೇ ಸೇವೆಯಲ್ಲಿದ್ದಲ್ಲಿ, ತಾವು ಸೇವೆ ಸಲ್ಲಿಸುತ್ತಿರುವ ಪ್ರಾಧಿಕಾರ/ಸಂಸ್ಥೆಯಿಂದ ಅರ್ಜಿ ಸಲ್ಲಿಕೆಗೆ ಅನುಮತಿ ಪತ್ರ. (ಮಾದರಿ ನೀಡಲಾಗಿದೆ)
   5. ಕಂಪ್ಯೂಟರ್ ಜ್ಞಾನವನ್ನು ಹೊಂದಿರುವ ಕುರಿತು ಸ್ವಯಂ ದೃಢೀಕರಿಸಿದ ದಾಖಲಾತಿ.

3. **ಅವಧಿ :**

   - **ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ : 12.01.2018 (ಬೆಳಿಗ್ಗೆ 10:30 ರಿಂದ)**
   - **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 10.02.2018 (ಸಂಜೆ 5:30 ಘಂಟೆಯೊಳಗೆ)**

4. **ಸೂಚನೆಗಳು:**

1. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ ಪ್ರತಿಯೊಂದು ಹುದ್ದೆಗಳಿಗಳಿಗೆ ಪ್ರತ್ಯೇಕ ಅರ್ಜಿ ಹಾಗೂ ಶುಲ್ಕವನ್ನು ಪಾವತಿಸಬೇಕು.

2. ಅಭ್ಯರ್ಥಿಯು ಅರ್ಜಿಯಲ್ಲಿ ನಮೂದಿಸಿದ ಇ–ಮೇಲ್ (e-mail) ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನು ಲಿಖಿತ ಪರೀಕ್ಷೆ ಮತ್ತು ಸಂದರ್ಶನ ಸೇರಿದಂತೆ ನೇಮಕಾತಿ ಪ್ರಕ್ರಿಯೆಗೆ ಸಂಬಂಧಪಟ್ಟ ಯಾವುದೇ ಸಂವಹನಕ್ಕೆ ಪರಿಗಣಿಸಲಾಗುವುದು.

3. ಅಭ್ಯರ್ಥಿಗಳು Online/Offline ಮುಖಾಂತರ ಅರ್ಜಿಯನ್ನು ಭರ್ತಿ ಮಾಡುವ ಮುನ್ನ, ಅಧಿಸೂಚನೆಯಲ್ಲಿ ನೀಡಿರುವ ಸೂಚನೆಗಳನ್ನು ಕಡ್ಡಾಯವಾಗಿ ಓದಿಕೊಳ್ಳತಕ್ಕದ್ದು ಹಾಗೂ ನೀಡಿರುವ ಸೂಚನೆಗಳನ್ವಯವೇ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು. ಅಪೂರ್ಣವಾದ ಅಥವಾ ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿರುವುದು ಕಂಡುಬಂದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

5. **ವಯೋಮಿತಿ:** ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂತೆ ಕನಿಷ್ಠ 18 ವರ್ಷ ವಯಸ್ಸಿನವನಾಗಿರತಕ್ಕದ್ದು. ಕ್ರಮ ಸಂಖ್ಯೆ 1ರ ಹುದ್ದೆಗೆ ಗರಿಷ್ಠ ವಯೋಮಿತಿ 38 ವರ್ಷಗಳು, ಕ್ರಮ ಸಂಖ್ಯೆ 02 ರಿಂದ 7ರ ಹುದ್ದೆಗೆ ಗರಿಷ್ಠ ವಯೋಮಿತಿ 35 ವರ್ಷಗಳು ಹಾಗೂ ಉಳಿದ ಹುದ್ದೆಗಳಿಗೆ ಗರಿಷ್ಠ ವಯೋಮಿತಿ 30 ವರ್ಷಗಳು.

6. **ಅರ್ಜಿ ಶುಲ್ಕ:**

- ಕ್ರಮ ಸಂಖ್ಯೆ 1 ರಿಂದ 6ರ ವರೆಗಿನ ಹುದ್ದೆಗಳಿಗೆ ಅರ್ಜಿ ಶುಲ್ಕ – ರೂ.2000/–
- ಶೀಘ್ರಲಿಪಿಗಾರರು/ಸಹಾಯಕ ಹುದ್ದೆಗಳಿಗೆ ಅರ್ಜಿ ಶುಲ್ಕ – ರೂ.1000/–
- ವಾಹನ ಚಾಲಕ/ಉಪಸಿಬ್ಬಂದಿ/ಸ್ವಚ್ಛತಾ ಸಿಬ್ಬಂದಿ ಹುದ್ದೆಗಳಿಗೆ ಅರ್ಜಿ ಶುಲ್ಕ – ರೂ.500/–

7. **ಅರ್ಜಿ ಶುಲ್ಕ ಪಾವತಿ ವಿಧಾನ :**

- ತಾವು ಸಲ್ಲಿಸುತ್ತಿರುವ ಹುದ್ದೆಗೆ ಸಂಬಂಧಿಸಿದ ಅರ್ಜಿ ಶುಲ್ಕವನ್ನು **'ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,** (**Karnataka State Souharda Fedaral Cooparative Ltd.,)** ಈ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಡಿ.ಡಿ. (ಡಿಮ್ಯಾಂಡ್ ಡ್ರಾಫ್ಟ್) ತೆಗೆಯಬೇಕು.
- ಡಿ.ಡಿ.ಯ ಹಿಂಭಾಗದಲ್ಲಿ ಹೆಸರು, ಅರ್ಜಿ ಸಲ್ಲಿಸಿರುವ ಹುದ್ದೆ, ಮೊಬೈಲ್ ಸಂಖ್ಯೆಯನ್ನು ನಮೂದಿಸುವುದು ಕಡ್ಡಾಯ.
- ಆಯಾ ಹುದ್ದೆಗೆ ನಿಗದಿಪಡಿಸಿದ ಮೊತ್ತದ ಡಿಡಿಯನ್ನು ಲಗತ್ತಿಸಿಲ್ಲದ ಅರ್ಜಿಯನ್ನು ಅಥವಾ ನಿಗದಿತ ಸಮಯದ ನಂತರ ತಲುಪಿದ ಅರ್ಜಿಯನ್ನು ಅಥವಾ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
- ಅರ್ಜಿ ಶುಲ್ಕವನ್ನು ಡಿ.ಡಿ. ರೂಪದಲ್ಲಿ ಮಾತ್ರ ಸ್ವೀಕರಿಸಲಾಗುವುದು. ಎಲ್ಲಾ ಶಾಖೆಗಳಲ್ಲಿ ನಗದೀಕರಣಗೊಳ್ಳಬಹುದಾದ ಚೆಕ್ (At Par Cheque) ಗಳನ್ನು ಪರಿಗಣಿಸುವುದಿಲ್ಲ.

**8. ಆಯ್ಕೆ ವಿಧಾನ:**

- ಆಯ್ಕೆಯನ್ನು ಸಂಯುಕ್ತ ಸಹಕಾರಿ ಸಿಬ್ಬಂದಿ ಸೇವಾನಿಯಮಾವಳಿಯಂತೆ ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಮಾಡಲಾಗುತ್ತದೆ. ಹಾಗೂ ಕ್ರಮ ಸಂಖ್ಯೆ 06, 08, 10ರ ಹುದ್ದೆಯ ಅಭ್ಯರ್ಥಿಗಳಿಗೆ ಕೌಶಲ್ಯ ಪರೀಕ್ಷೆಯನ್ನು ಮಾಡಲಾಗುತ್ತದೆ.
- ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಹುದ್ದೆಗಳಿಗನುಸಾರವಾಗಿ 1:5ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಹ್ವಾನಿಸಲಾಗುವುದು.

**9. ಲಿಖಿತ ಪರೀಕ್ಷೆ ಪಠ್ಯಕ್ರಮ:**

ಲಿಖಿತ ಪರೀಕ್ಷೆಯು ಎರಡು ಪತ್ರಿಕೆಗಳನ್ನು ಹೊಂದಿರುತ್ತದೆ. ಇವು ಬಹು ಆಯ್ಕೆ ಮಾದರಿ ಪ್ರಶ್ನೆ ಪತ್ರಿಕೆಗಳಾಗಿದ್ದು ಒಟ್ಟು 200 ಅಂಕಗಳನ್ನು ಒಳಗೊಂಡಿರುತ್ತದೆ. (ಪ್ರಶ್ನೆ ಪತ್ರಿಕೆ ಕನ್ನಡ ಮತ್ತು ಆಂಗ್ಲ ಬಾಷೆಯಲ್ಲಿರುತ್ತದೆ)

**ಪತ್ರಿಕೆ–1**

| | |
|---|---|
| ಅ. 97ನೇ ಭಾರತ ಸಂವಿಧಾನ ತಿದ್ದುಪಡಿ | 25 ಅಂಕಗಳು |
| ಆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 | 25 ಅಂಕಗಳು |
| ಇ. ಸಹಕಾರ ಚಳುವಳಿ | 35 ಅಂಕಗಳು |
| ಈ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 | 40 ಅಂಕಗಳು |

**ಪತ್ರಿಕೆ–2**

| | |
|---|---|
| ಅ. ಕನ್ನಡ ಭಾಷಾ ಜ್ಞಾನಕ್ಕೆ | 25 ಅಂಕಗಳು |
| ಆ. ಸಾಮಾನ್ಯ ಜ್ಞಾನಕ್ಕೆ | 25 ಅಂಕಗಳು |
| ಇ. ಬ್ಯಾಂಕಿಂಗ್ ಹಾಗೂ ಅಕೌಂಟಿಂಗ್ | 25 ಅಂಕಗಳು |

**ಗಮನಿಸಿ:** ಲಿಖಿತ ಪರೀಕ್ಷೆ/ಸಂದರ್ಶನ/ಕೌಶಲ್ಯ ಪರೀಕ್ಷೆಗೆ ಕರೆಯಲ್ಪಟ್ಟ ಅಭ್ಯರ್ಥಿಗಳಿಗೆ ಯಾವುದೇ ಭತ್ಯೆಗಳನ್ನು ನೀಡಲಾಗುವುದಿಲ್ಲ.

**10. ಶೈಕ್ಷಣಿಕ ವಿದ್ಯಾರ್ಹತೆ**

- ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಸಂಬಂಧಿಸಿದ ಹುದ್ದೆಗಳಿಗೆ ಸೂಚಿಸಿದ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಬೇಕು.
- ಅಂಚೆ ಶಿಕ್ಷಣ ಹಾಗೂ ದೂರಶಿಕ್ಷಣದಲ್ಲಿ ಪಡೆದಿರುವ ವಿದ್ಯಾರ್ಹತೆಯನ್ನು ಪರಿಗಣಿಸುವುದಿಲ್ಲ.

➢ ತಾಲ್ಲೂಕು ಕೇಂದ್ರ ಮತ್ತು ತಾಲ್ಲೂಕಿಗಿಂತ ಕೆಳಹಂತದ ಪ್ರದೇಶದಲ್ಲಿ ಎಸ್‌ಎಸ್‌ಎಲ್‌ಸಿ (10ನೇ ತರಗತಿ) ವ್ಯಾಸಂಗ ಮಾಡಿರುವ ಅಭ್ಯರ್ಥಿಗಳು ಆಯಾ ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಶೇ.50% ಅಂಕಗಳೊಂದಿಗೆ ಹೊಂದಿರಬೇಕು.

➢ ತಾಲ್ಲೂಕು ಕೇಂದ್ರಕ್ಕಿಂತ ಮೇಲ್ಪಟ್ಟ ಪ್ರದೇಶದಲ್ಲಿ ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡಿರುವ ಅಭ್ಯರ್ಥಿಗಳು ಆಯಾ ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಶೇ.60% ಅಂಕಗಳೊಂದಿಗೆ ಹೊಂದಿರಬೇಕು.

➢ ಅಭ್ಯರ್ಥಿಗಳು ವಿದ್ಯಾರ್ಹತೆ ಪಡೆದ ನಂತರದ ಸೇವೆಯನ್ನು ಮಾತ್ರ ಸೇವಾನುಭವ ಎಂದು ಪರಿಗಣಿಸಲಾಗುವುದು. ವಿದ್ಯಾರ್ಹತೆ ಪಡೆಯುವಾಗಿನ ಅರೆ ಅವಧಿಯ (Part Time) ಸೇವೆಯನ್ನು ಸೇವಾನುಭವಕ್ಕೆ ಪರಿಗಣಿಸುವುದಿಲ್ಲ.

➢ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಹುದ್ದೆಗಳಿಗೆ ಅಗತ್ಯವಿರುವ ವಿದ್ಯಾರ್ಹತೆಯ ಎಲ್ಲಾ ಸೆಮಿಸ್ಟರ್/ವರ್ಷಗಳಲ್ಲಿ, ಎಲ್ಲಾ ವಿಷಯಗಳಿಗೆ (ಬಾಷೆಗಳು ಒಳಗೊಳಡಂತೆ) ನಿಗದಿಪಡಿಸಿರುವ ಗರಿಷ್ಟ ಅಂಕಗಳು ಮತ್ತು ಪಡೆದಿರುವ ಅಂಕಗಳನ್ನು ಪರಿಗಣಿಸಿ ಶೇಕಡವಾರು ಸರಾಸರಿ ಅಂಕವನ್ನು ಸ್ಪಷ್ಟವಾಗಿ ನಮೂದಿಸುವುದು.

➢ ಗ್ರೇಡ್ ಅಂಕಗಳನ್ನು ಪಡೆದ ಅಭ್ಯರ್ಥಿಗಳು, ಅವರ ಗ್ರೇಡ್ ಅಂಕಗಳನ್ನು ಶೇಕಡಾವಾರು ಅಂಕಗಳಿಗೆ ಪರಿವರ್ತಿಸಿ ವಿಶ್ವ ವಿದ್ಯಾಲಯ ನೀಡಿರುವ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಶೇಕಡಾವರು ಅಂಕಗಳನ್ನು ತಪ್ಪದೆ ನಮೂದಿಸಬೇಕು.

**11. ಸಾಮಾನ್ಯ ಸೇವಾ ಷರತ್ತುಗಳು:**

1. ಸಂಯುಕ್ತ ಸಹಕಾರಿಯ ಸೇವೆಗೆ ಆಯ್ಕೆಯಾದ ಅಭ್ಯರ್ಥಿಯು ಎರಡು ವರ್ಷಗಳ ಕಾಲ ಪರೀಕ್ಷಾರ್ಥ ಸೇವಾ ಅವಧಿಯನ್ನು ಹೊಂದಿರುತ್ತಾರೆ.
2. ತೃಪ್ತಿದಾಯಕ ಸೇವಾ ಅವಧಿಯನ್ನು ಪೂರ್ಣಗೊಳಿಸಿದ ಅಭ್ಯರ್ಥಿಯ ಸೇವೆಯನ್ನು ಕ.ರಾ.ಸೌ.ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ನಿರ್ಣಯಕ್ಕೆ ಒಳಪಟ್ಟು ಖಾಯಂಯಾತಿ ಗೊಳಿಸಲಾಗುತ್ತದೆ.
3. ಪರೀಕ್ಷಾರ್ಥ ಅವಧಿಯಲ್ಲಿನ ಮಾಸಿಕ ಕ್ರೋಢೀಕೃತ ವೇತನ ಈ ಕೆಳಗಿನಂತಿರುತ್ತದೆ. ಸೇವಾ ಖಾಯಂಯಾತಿಯ ನಂತರ ಆಯಾ ಹುದ್ದೆಗಳಿಗನುಗುಣವಾಗಿ ಈ ಕೆಳಗಿನಂತೆ ವೇತನ ಶ್ರೇಣಿಯನ್ನು ನೀಡಲಾಗುತ್ತದೆ.

| ಕ್ರ.ಸಂ | ಹುದ್ದೆ | ಪರಿಕ್ಷಾರ್ಥ ಅವಧಿಯಲ್ಲಿ ಕ್ರೋಡಿಕೃತ ವೇತನ | | ಸೇವಾ ಖಾಯಮಾತಿಯ ನಂತರ ವೇತನ ಶ್ರೇಣಿ |
|---|---|---|---|---|
| | | ಮೊದಲ ವರ್ಷ | ಎರಡನೆಯ ವರ್ಷ | |
| 1 | ಉಪ ಪ್ರಧಾನ ವ್ಯವಸ್ಥಾಪಕರು | 30000 | 35000 | 26000–700–28800–800–33600–900–39000–1050–45300–1200–47700 |
| 2 | ಸಹ ಪ್ರಧಾನ ವ್ಯವಸ್ಥಾಪಕರು | 25000 | 28000 | 19000–500–21000–600–24600–700–28800–800–33600–900–36300 |
| 3 | ಅಧಿಕಾರಿ | 18000 | 20000 | 16800–400–17200–450–19000–500– |

| | | | | |
|---|---|---|---|---|
| 4 | ತಾಂತ್ರಿಕ ಅಧಿಕಾರಿ (ಅಧಿಕಾರಿ ಶ್ರೇಣಿ) | 18000 | 20000 | 21000–600–24600–700–28800–800–29600. |
| 5 | ಸೌಹಾರ್ದ ಅಭಿವೃದ್ಧಿ ಅಧಿಕಾರಿ (ಕಿರಿಯ ಅಧಿಕಾರಿ ಶ್ರೇಣಿ) | 15000 | 18000 | 14550–350–15600–400–17200–450–19000–500–21000–600–24600–700–26700 |
| 6 | ವಿನ್ಯಾಸಗಾರರು (ಕಿರಿಯ ಅಧಿಕಾರಿ ಶ್ರೇಣಿ) | 15000 | 18000 | |
| 7 | ಸಹಾಯಕರು | 13000 | 15000 | 11600–200–12000–250–13000–300–14200–350–15600–400–17200–450–19000–500–21000 |
| 8 | ಶೀಘ್ರಲಿಪಿಗಾರರು (ಸ್ಟೇನೋ) | 13000 | 15000 | |
| 9 | ಉಪಸಿಬ್ಬಂದಿ | 10000 | 12000 | 9600–200–12000–250–13000–300–14200–350–14550 |
| 10 | ಉಪಸಿಬ್ಬಂದಿ ಕಮ್ ವಾಹನ ಚಾಲಕ | 12000 | 14000 | |
| 11 | ಸ್ವಚ್ಚತಾ ಸಿಬ್ಬಂದಿ | 9000 | 11000 | 6500–100–8100–150–9600–200–12000–250–13000. |

4. ಸೇವಾ ಖಾಯಂಯಾತಿ ನಂತರ ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ಮತ್ತು ನಗರ ಪರಿಹಾರ ಭತ್ಯೆಗಳು ಆಡಳಿತ ಮಂಡಳಿಯು ಕಾಲ ಕಾಲಕ್ಕೆ ನಿಗದಿಪಡಿಸಿದ ದರದಲ್ಲಿ ಇರುತ್ತವೆ.

5. ವಿದ್ಯಾರ್ಹತೆ ಹಾಗೂ ಅನುಭವಕ್ಕೆ ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಸಂದರ್ಶನದ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

6. ಕ್ರಮ ಸಂಖ್ಯೆ 01 ರಿಂದ 06ರವರೆಗಿನ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳು ಸಂಯುಕ್ತ ಸಹಕಾರಿಗೆ ರೂ.2,00,000/–ಗಳ ಹಾಗೂ ಉಳಿದ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳು ಸಂಯುಕ್ತ ಸಹಕಾರಿಗೆ ರೂ.1,00,000/–ಗಳ ಇಂಡೆಮ್ನಿಟಿ ಬಾಂಡ್ ನೀಡಬೇಕು.

7. ರಾಜ್ಯದ ಯಾವುದೇ ಸ್ಥಳದಲ್ಲಿ ಕಾರ್ಯನಿರ್ವಹಿಸಲು ಸಿದ್ಧವಿರುವ ಅಭ್ಯರ್ಥಿಗಳು ಮಾತ್ರ ಅರ್ಜಿಯನ್ನು ಸಲ್ಲಿಸಬೇಕು.

8. ನಿಗದಿಪಡಿಸಿರುವ ಹುದ್ದೆಗಳ ಸಂಖ್ಯೆಯನ್ನು ಮುನ್ಸೂಚನಾರಹಿತವಾಗಿ ಮರುನಿಗದಿಗೊಳಿಸುವ ಅಧಿಕಾರ ಸಂಯುಕ್ತ ಸಹಕಾರಿಗೆ ಪ್ರದತ್ತವಾಗಿರುತ್ತದೆ.

9. ಸಂಯುಕ್ತ ಸಹಕಾರಿಯು ಯಾವುದೇ ಅರ್ಜಿಯನ್ನು ಕಾರಣವನ್ನು ನೀಡದೆ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತದೆ.

10. ಆಯ್ಕೆಯಾದ ಅಭ್ಯರ್ಥಿಗಳು ಸಂಯುಕ್ತ ಸಹಕಾರಿಯ ಸೇವಾ ನಿಯಮಗಳಿಗೆ ಒಳಪಟ್ಟಿರುತ್ತಾರೆ. ಹಾಗೂ ಸಂಯುಕ್ತ ಸಹಕಾರಿಯು ಯಾವುದೇ ಹುದ್ದೆಗೆ ಸಂಬಂಧಿಸಿದಂತೆ ಪ್ರತ್ಯೇಕ ಸೇವಾ ಷರತ್ತುಗಳನ್ನು ವಿಧಿಸುವ ಅಧಿಕಾರವನ್ನು ಹೊಂದಿರುತ್ತದೆ.

11. ನೇಮಕಾತಿಗೆ ಸಂಬಂಧಿಸಿದ ಇನ್ನಿತರ ಯಾವುದೇ ಮಾಹಿತಿಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವೆಬ್‌ಸೈಟ್/ಕೇಂದ್ರ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು.

12.ನೇಮಕಾತಿ ಪ್ರಕ್ರಿಯೆಯನ್ನು ಯಾವುದೇ ಸಂದರ್ಭದಲ್ಲಿಯೂ ಯಾವುದೇ ಕಾರಣವನ್ನು ನೀಡದೆ ರದ್ದುಗೊಳಿಸುವ ಅಧಿಕಾರವನ್ನು ಸಂಯುಕ್ತ ಸಹಕಾರಿಯು ಹೊಂದಿರುತ್ತದೆ.

**12. ಸಾಮಾನ್ಯ ಅರ್ಹತಾ ಷರತ್ತುಗಳು:–**

1. ಭಾರತೀಯ ನಾಗರೀಕನಾಗಿರತಕ್ಕದ್ದು.
2. ಅರ್ಜಿ ಸಲ್ಲಿಸಲು ಅಂತಿಮ ದಿನಾಂಕದಂತೆ ಕನಿಷ್ಠ 18 ವರ್ಷ ವಯಸ್ಸಿನವನಾಗಿರತಕ್ಕದ್ದು.
3. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತನಾಗಿರತಕ್ಕದ್ದು ಮತ್ತು ಅವರ ನೇಮಕಾತಿಯ ಹುದ್ದೆಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವವಿರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತನಾಗಿರತಕ್ಕದ್ದು.
4. ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

**13. ದುರ್ನಡತೆ :**

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ/ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅವನು/ಅವಳು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ, ಹುದ್ದೆಯ ಸಂದರ್ಶನದಿಂದ/ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

ಸಹಿ/–

ವ್ಯವಸ್ಥಾಪಕ ನಿರ್ದೇಶಕ

ಮತ್ತು ಸದಸ್ಯ ಕಾರ್ಯದರ್ಶಿ, ಸಿಬ್ಬಂದಿ ನೇಮಕಾತಿ ಸಮಿತಿ

---

**ಪ್ರಸ್ತುತವಾಗಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ನೇಮಕಾತಿ ಪ್ರಾಧಿಕಾರಿಗಳಿಂದ ಪಡೆಯಬೇಕಾದ ನಿರಾಕ್ಷೇಪಣಾ/ಅನುಮತಿ ಪತ್ರದ ನಮೂನೆ**

ನಿರಾಕ್ಷೇಪಣಾ/ಅನುಮತಿ ಪತ್ರದ ನಮೂನೆ ಸಂಖ್ಯೆ: ದಿನಾಂಕ:

ಶ್ರೀ/ಶ್ರೀಮತಿ ------------------------ ತಂದೆ--------------- ಇವರು --------- ದಿನಾಂಕ ದಿಂದ ---------- ದಿನಾಂಕದವರೆಗೆ -------------------ಸಂಸ್ಥೆಯಲ್ಲಿ ------------------ ಹುದ್ದೆಯಲ್ಲಿ ಖಾಯಂ/ಹಂಗಾಮಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರು ಕ.ರಾ.ಸೌ.ಸಂ.ಸನಿ., ಇದರ ನೇಮಕಾತಿ ಅಧಿಸೂಚನೆಯಂತೆ ಆಹ್ವಾನಿಸಿರುವ --------------- ಹುದ್ದೆಗೆ ಅರ್ಜಿ ಸಲ್ಲಿಸಲು ಈ ಸಂಸ್ಥೆ/ಇಲಾಖೆಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ.

ಪ್ರಾಧಿಕಾರಿಗಳ ಪದನಾಮ, ಸಹಿ & ಮೊಹರು